## ಇಲ್ಲಿಯವರೆಗೆ



ಸಂಚಾರ ನಿಯಮ ಉಲ್ಲಂಘನೆ ಮಾಡುವವರ ಮೇಲೆ ಜಂಕ್ಷನ್‌ನಲ್ಲಿದ್ದ ವೇಗಸೂಚಕ ರೊಬೋಗಳು ಎಚ್ಚರಿಕೆ ನೀಡುತ್ತಿದ್ದವು. ಸಿಗ್ನಲ್ ಜಂಪಿಂಗ್ ಮಾಡುವವರ ಮೇಲೆ ಕ್ಯಾಮೆರಾ ಕಣ್ಗಾವಲಿದ್ದು ಇಂಥವರ ಮೇಲೆ ದಂಡ ಹಾಕಲಾಗುತ್ತಿತ್ತು ಅಲ್ಲದೆ ದಂಡದ ಮೊತ್ತವನ್ನು ಅವರ ಬ್ಯಾಂಕ್ ಅಕೌಂಟ್‌ನಿಂದಲೇ ಕಟಾವಾಗುವಂತೆ ನೋಡಿಕೊಳ್ಳಲಾಗುತ್ತಿತ್ತು. ಸಂಚಾರ ವಾರ್ಡನ್ ಹಾಗೂ ರೊಬೋ ಕ್ಯಾಪ್‌ಗಳ ನಿರ್ದೇಶನವನ್ನೂ ಮೀರಿ ನಿಯಮ ಉಲ್ಲಂಘಿಸಿದ ಇಬ್ಬರ ವಾಹನದ ಕೀಗಳನ್ನು ವಶಕ್ಕೆ ಪಡೆಯುತ್ತಾಳೆ ಹನ್ಸಾ. ಆಗ ಅವರು 'ಮ್ಯಾಮ್ ನಾವು ವಿದ್ಯಾರ್ಥಿಗಳು, ನಮ್ಮ ಭವಿಷ್ಯ ಹಾಳು ಮಾಡಬೇಡಿ. ದಂಡ ಹಾಕಿದರೆ ನಮ್ಮ ವಾಹನ ಪರವಾನಿಗೆ ರದ್ದಾಗುತ್ತದೆ ಎಂದೆಲ್ಲ ಹೇಳಿ ಅಂಗಲಾಚುತ್ತಾರೆ. ಆದರೆ ಅವರನ್ನು ಮಾತಿನಲ್ಲೇ ತಿವಿಯುತ್ತಾಳೆ. ಈ ಮಧ್ಯೆ ವಾಹನದಲ್ಲೇ ಗರ್ಭಿಣಿಯೊಬ್ಬಳು ಶಿಶುವಿಗೆ ಜನ್ಮ ನೀಡಿದ್ದನ್ನು ಹನ್ಸಾ ಅತ್ಯಂತ ಸನಿಹದಿಂದ ವೀಕ್ಷಿಸುತ್ತಾಳೆ. ಆ ಮಹಿಳೆ ಜೀವನ್ಮರಣದ ನಡುವೆ ಹೋರಾಡಿ ಮಗು ಹೆತ್ತುದನ್ನು ನೋಡಿ ಹನ್ಸಾ ಮನಸ್ಸು ವಿಚಲಿತವಾಗುತ್ತದೆ.

ಈ ನಡುವೆ ಅರೆಮಾನವ ಪಡೆ ಸಮಾನ ಹಕ್ಕುಗಳಿಗಾಗಿ ನಡೆಸಿದ ಪಾದಯಾತ್ರೆ ರಸ್ತೆಯ ಸುಮಾರು ಐದು ಕಿಮೀ ದೂರದವರೆಗೂ ಸಾಗಿ ಸುಗಮ ಸಂಚಾರಕ್ಕೆ ಸಂಚಕಾರ ತರುತ್ತದೆ. ಇದು ಶಾಲಾ ಮಕ್ಕಳ ಸುರಕ್ಷತೆಗೂ ಧಕ್ಕೆಯಾಗುವಂತಿತ್ತು. ಹನ್ಸಾ ಮತ್ತು ಅನಘಾ ಇಬ್ಬರೂ ಇದನ್ನು ಸಮರ್ಥವಾಗಿ ನಿಭಾಯಿಸುತ್ತಾರೆ.

ಒಳಗೆ ಕಾಲಿರಿಸಿದೊಡನೆ ಹನ್ಸಾ ನಿರೀಕ್ಷೆಗೆ ತದ್ವಿರುದ್ಧವಾಗಿ ಅಲ್ಲಿ ಮಿನಿ ಕೊಠಡಿಗಳಿದ್ದವು. ಹೊರಗೆ ಕೆಂಪುದೀಪ ಬೆಳಗುತ್ತಿದ್ದರೆ, ಅಲ್ಲಿ ಯಾವುದೋ ಪರೀಕ್ಷೆ ನಡೆಯುತ್ತಿದ್ದು ಅದರ ಫಲಿತಾಂಶ ಪಡೆಯುವಲ್ಲಿ ಸಂಶೋಧಕ ನಿರತನಾಗಿದ್ದನೆಂಬುದನ್ನು ಸೂಚಿಸುತ್ತಿತ್ತು.

'ಈ ಎರಡೂ ಕೊಠಡಿಗಳಲ್ಲಿ ಪರೀಕ್ಷೆಗಳು ನಡೆಯುತ್ತಿವೆ. ಅದಕ್ಕೆ ಆಮೇಲೆ ಹೋದರಾಯಿತು. ಆ ಕೊನೆಯಲ್ಲಿರುವ ಒಂದು ಕೊಠಡಿಯ ಹೊರಗೆ ಹಸಿರುದೀಪ ಬೆಳಗುತ್ತಿರುವುದರಿಂದ ಅಲ್ಲಿಗೆ ಹೋಗೋಣ' ಎಂದು ಅದರೊಳಗೆ ಕರೆದೊಯ್ದಿದ್ದ. ಒಳಗಿನ ಕೊಠಡಿಯ ಮೂರೂ ಗೋಡೆಗಳ ಮೇಲೆ ಅಸ್ಪಷ್ಟ ದೃಶ್ಯಗಳು ಮೂಡಿದ್ದವು. ಅಲ್ಲೇ ಕುರ್ಚಿಯಲ್ಲಿ ಕುಳಿತಿದ್ದ ಸಂಶೋಧನಾ ತಂಡದ ವ್ಯಕ್ತಿ ಯಾವುದೋ ಲೆಕ್ಕಾಚಾರದಲ್ಲಿ ತೊಡಗಿದಂತಿತ್ತು. ಅವರು ಅವಿರತ್‌ನನ್ನು ಗುರುತಿಸಿದ್ದರು.

'ಹಲೋ ಅವಿ. ಏನು ಈ ಕಡೆ?' ಎಂದವರು ಪ್ರಶ್ನಿಸಿದಾಗ, ಅವಿರತ್ ತನ್ನ ಬದಿಯಲ್ಲಿದ್ದ ಹನ್ಸಾಳ ಪರಿಚಯ ಮಾಡಿ ವಿಷಯ ತಿಳಿಸಿದ.

'ನಮ್ಮದಿನ್ನೂ ಸಂಶೋಧನಾ ಹಂತದಲ್ಲಿರುವುದರಿಂದ, ಫಲಿತಾಂಶವನ್ನು ಹೇಳುವಂತಿಲ್ಲ. ಆದರೂ ಇಲ್ಲಿಗೆ ಚಾಲಕರು ಯಾವ ವೇಗದಲ್ಲಿ ಚಾಲನೆ ಮಾಡಿದರೆ ಅಪಘಾತಗಳಾದಾಗ ಎಷ್ಟು ಫೋರ್ಸ್ ದೇಹದ ಮೇಲೆ ಬಿದ್ದು ಅವರ ದೇಹಕ್ಕೆ ಗಾಯಗಳಾಗುತ್ತವೆ ಎಂಬುದರ ವಿವರ ಪಡೆಯಲಾಗುತ್ತದೆ. ಬೇರೆ ಕೊಠಡಿಗಳಲ್ಲಿ ಬೇರೆ ಬೇರೆ ಉಪವಿಷಯಗಳ ವಿಶ್ಲೇಷಣೆ ಮಾಡಲಾಗುತ್ತಿದೆ. ಅವುಗಳೆಲ್ಲ 'ಕಂಡೀಶನ್ಡ್ ಎನ್‌ವಿರಾನ್ಮೆಂಟ್'ನಲ್ಲಿ ನಡೆಯುವಂತಹವು.'

'ಅಲ್ಲಿಗೂ ಹೋಗಿ ನೋಡಬಹುದೇ?'

'ಅಲ್ಲೂ ಇದೇ ರೀತಿ ಸ್ಕ್ರೀನ್‌ಗಳಿರುತ್ತವೆ. ಚಾಲಕನೊಬ್ಬನಿಗಷ್ಟೇ ಅಲ್ಲಿ ನೈಜವೆಂಬಂತಹ ದೃಶ್ಯಗಳು ಕಂಡು ಬರುತ್ತವೆ.'

'ಇದೇನು 'ಗೇಮಿಂಗ್' ರೀತಿಯ ಪರೀಕ್ಷೆಗಳೇ?' ಕುತೂಹಲ ತಡೆಯಲಾಗದೆ ಹನ್ಸಾ ಕೇಳಿದಳು.

'ಚಾಲನೆಯ ಗೇಮ್ ಎಂದೇ ತಿಳಿಯಿರಿ'. ಮೊಟಕು ಉತ್ತರ ನೀಡಿದ್ದರು.

'ಒಬ್ಬ ವ್ಯಕ್ತಿಯನ್ನು ಪ್ರಾಯೋಗಿಕವಾಗಿ ಇಲ್ಲಿ ಪರೀಕ್ಷೆಗೆ ಒಡ್ಡಲಾಗುತ್ತದೆ. ಆತ ಹೆಡ್‌ಗೇರ್ ಧರಿಸಿ ಕೆಲವೊಂದು ಉಪಕರಣಗಳನ್ನು ಕೈಯಲ್ಲಿ ಹಿಡಿದುಕೊಂಡು ಇಲ್ಲಿ ಎದುರುಗಡೆ ಕಾಣಿಸುವ ಪರದೆಗಳ ಮೇಲೆ 3ಡಿ ವ್ಯವಸ್ಥೆಯಲ್ಲಿ ಮೂಡುವ ದೃಶ್ಯಗಳನ್ನು ಅನುಸರಿಸಬೇಕಾಗುತ್ತದೆ. ತನಗೆ ಮುಂದುವರಿಸುವುದು ಬೇಡವೆಂದರೆ ಕಾಲಿನಲ್ಲಿ ತುಳಿದು ನಿಲ್ಲಿಸುವ ವ್ಯವಸ್ಥೆ ಇರುತ್ತದೆ. ರಸ್ತೆಯಲ್ಲಿ ಚಾಲಕ ವಾಹನವನ್ನು ಓಡಿಸುವಂತೆಯೇ ಇಲ್ಲೂ ಕೃತಕವಾಗಿ ಪರಿಸರ ಹಾಗೂ ಉಪಕರಣಗಳನ್ನು ನಿರ್ಮಾಣ ಮಾಡಲಾಗಿದೆ.'

'ಬಹುಶಃ ನಿಮ್ಮ ಕೆಲಸಕ್ಕೆ ನಾವು ಭಂಗ ತಂದಿದ್ದೇವೇನೋ? ನಾವು ಹೊರಡ್ತೀವಿ. ನೀವು ನಿಮ್ಮ ಕೆಲಸ ಮುಂದುವರಿಸಿ' ಎಂದು ಅವಿರತ್ ಹೊರಡಲನುವಾದ.

ಬದಿಯಲ್ಲಿದ್ದ ಕ್ಯಾಬಿನ್ ಹೊರಗಿನ ದೀಪ ಕೆಂಪು ಬಣ್ಣದಿಂದ ಹಸಿರು ಬಣ್ಣಕ್ಕೆ ತಿರುಗಿದಾಗ ಅವರಿಬ್ಬರೂ 'ಒಂದು ಬಾರಿ ನೋಡಿಯೇ ಬಿಡುವಾ' ಎಂದು ಆ ಕ್ಯಾಬಿನ್ ಒಳಗೆ ಕಾಲಿರಿಸಿದ್ದರು.

ಹಿಂದಿನ ಕೊಠಡಿಯ ವ್ಯಕ್ತಿ ತಿಳಿಸಿದಂತೆ ಇಲ್ಲೊಬ್ಬ ವ್ಯಕ್ತಿ ತನ್ನ ತಲೆಗೆ 'ಹೆಡ್ ಗೇರ್' ಧರಿಸಿ ಕೈಯಲ್ಲಿ ಹ್ಯಾಂಡಲ್ ಹಿಡಿದು, ಎದುರಿಗಿನ ದೃಶ್ಯಗಳನ್ನು ನೋಡುತ್ತಾ ಯಾವುದೋ ವಾಹನವನ್ನು ಓಡಿಸುತ್ತಿರುವ ಭ್ರಮೆ ಆತನಲ್ಲಿ ಮೂಡಿಸಿದಂತಿತ್ತು. 'ಇದ್ಯಾವ ಪರೀಕ್ಷೆಯೋ' ಎಂದು ಕುತೂಹಲದಿಂದ ಅವರು ವೀಕ್ಷಿಸುವಾಗಲೇ ಪರೀಕ್ಷೆ ಮುಗಿದು ಆ ವ್ಯಕ್ತಿ ಸಹಾಯಕ ಸಂಶೋಧಕನ ಅನುಮತಿ ಕೋರಿ ಹೊರನಡೆದಿದ್ದ. ಆ ಸಹಾಯಕ ಸಂಶೋಧಕ ತನ್ನ ಡಿಜಿನೋಟ್ ಬುಕ್‌ನಲ್ಲಿ ಮಾಹಿತಿಗಳನ್ನು ನಮೂದಿಸಿ ತಾನೂ ಹೊರಡುವವನಿದ್ದು, ಅವಿರತ್‌ನ ಆಗಮನದಿಂದ ನಿಂತ.

'ತನಿಖಾಧಿಕಾರಿಯವರು ಯಾವ ಸುಳಿವನ್ನು ಹುಡುಕಿಕೊಂಡು ಇಲ್ಲಿಗೆ ಪಾದ ಬೆಳೆಸಿದ್ದು? ಇಲ್ಲಿ ಯಾರೂ ಅಪರಾಧಿಗಳಿಲ್ಲವಲ್ಲ...?' ಎಂದು ಹಾಸ್ಯಮಯವಾಗಿಯೇ ಮಾತು ಆರಂಭಿಸಿದರು.

ಅವರು ತಾವು ಬಂದ ಬಂದ ಉದ್ದೇಶ ತಿಳಿಸಿದರು.

'ಇಲ್ಲಿ ಚಾಲಕನ ದೃಷ್ಟಿಯು ಅತಿ ವೇಗದಲ್ಲೂ ತಪ್ಪು ನಿರ್ಧಾರಗಳನ್ನು ತೆಗೆದುಕೊಳ್ಳದಿರಲು ಕೆಲವು ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ವೇಗ ಅತಿಯಾದಾಗ ಸಾಧಾರಣವಾಗಿ ಚಾಲಕನ ದೃಷ್ಟಿಯು ಸುರಂಗ ದೃಷ್ಟಿಯ ಪ್ರಕ್ರಿಯೆಗೆ ಒಳಪಟ್ಟು ದೃಷ್ಟಿ ಕಿರಿದಾಗುತ್ತಾ ಹೋಗುತ್ತದೆ. ಆ ನ್ಯೂನತೆಯನ್ನು ಹೋಗಲಾಡಿಸಿ, ವೇಗ ಹೆಚ್ಚಾದರೂ ವೇಗದ ಕುರುಡುತನ ಮೀರಿ ಅಥವಾ ಅಕ್ಕಪಕ್ಕದ ವಾತಾವರಣ ಅವಲೋಕಿಸಿ ಹೊರಡುವಂಥಹ ಕೆಲವು ಉಪಕರಣಗಳ ಸಂಶೋಧನೆಯಲ್ಲಿ ತೊಡಗಿದ್ದೀನಿ.'

'ಗ್ರೇಟ್...' ಎಂದು ಅವಿರತ್ ಉದ್ಗರಿಸಿದ. ಹನ್ಸಾ ಸುತ್ತಲೂ ಪರಿವೀಕ್ಷಿಸಿ ಇನ್ನು ಇಲ್ಲಿ ತಮಗೇನೂ ಕೆಲಸವಿಲ್ಲವೆಂದು ಮನಗಂಡು ಅವಿರತ್‌ನೊಂದಿಗೆ